# ಕವಿಶೈಲದ ಮಳೆ ಚಿತ್ರಗಳು!

ಚಿತ್ರ-ಲೇಖನ:
**ಅಶೋಕ ಉಚ್ಚಂಗಿ**



ಗಿರಿ ಶ್ರೇಣಿಗಳ ತೊಡೆಯ ಮೇಲೆ ಕುಳಿತಿರುವ ಕುಪ್ಪಳಿಯ ಮಳೆಗಾಲದ ಸೊಬಗನ್ನು ಆರಾಧಿಸಿ ಕಾವ್ಯ, ಕಥೆಗಳ ಮೂಲಕ ನಮಗೆ ರಸಾನುಭವ ನೀಡಿದವರು ಕುವೆಂಪು. ಅವರು ಕಂಡ ಮಳೆಗಾಲದ ಕುಪ್ಪಳಿ ನೋಟ ಈಗ ಹೇಗಿರಬಹುದು ಎಂಬ ಕುತೂಹಲ ನನ್ನನ್ನು ಜುಲೈ ತಿಂಗಳ ಭಯಂಕರ ಮಳೆಯ ದಿನವೊಂದರಲ್ಲಿ ಕುಪ್ಪಳಿಯತ್ತ ಎಳೆದು ತಂದಿತು.

ತೀರ್ಥಹಳ್ಳಿ– ಕೊಪ್ಪ ರಸ್ತೆಯಲ್ಲಿ ದೇವಂಗಿ ಊರನ್ನು ದಾಟಿ ಮುಖ್ಯರಸ್ತೆ ಬಿಟ್ಟು ಎಡಬದಿಯ ಕುಪ್ಪಳಿಯ ಹಾದಿ ಹಿಡಿದಾಗ ಮಳೆಯ ಲಹರಿ ಹಿತವಾಗಿತ್ತು. ಕಾಡಿನ ಹಾದಿಯಂತಿದ್ದರೂ ಅಲ್ಲೊಂದು ಒಂಟಿಮನೆ, ರಸ್ತೆಯಂಚಲ್ಲಿ ಮೇಯುತ್ತಿದ್ದ ಕತ್ತಿಗೆ ಕುಂಟೆ, ಬಿದಿರಿನ ಗಂಟೆ ಕಟ್ಟಿಸಿಕೊಂಡ ದನಗಳು, ಅನತಿ ದೂರದಲ್ಲೊಂದು ಅಡಿಕೆ ತೋಟ ನಾಡಿನ ಲಕ್ಷಣದ ಸಾಕ್ಷಿಯಾಗಿದ್ದವು. ಕಿರಿದಾದ ಡಾಂಬರು ರಸ್ತೆಯಲ್ಲಿ ಮುಂದೆ ಸಾಗಿದಾದ ಸಣ್ಣಹಳ್ಳವೊಂದು ಕೆಂಪಡರಿದ ನೀರಿನಿಂದ ತುಂಬಿ ಹರಿಯುತ್ತಿತ್ತು. ಅಲ್ಲಿಂದ ಏರುದಾರಿಯಲ್ಲಿ ಅಷ್ಟೇನೂ ನಿಬಿಡವಲ್ಲದ ಹಾದಿಯಲ್ಲಿ ಸಾಗಿದಾಗ ಕಂಡದ್ದು ಮಳೆಯಲ್ಲಿ ಮೀಯುತ್ತಿದ್ದ ಕುವೆಂಪು ಶತಮಾನೋತ್ಸವ ಸ್ಮಾರಕ ಭವನ.

ಮುಂಗಾರ ಮಳೆಯ ಮೋಡಿಯಲ್ಲಿ ಭವನದ ಅಂಗಳಕ್ಕೊಂದು ವಿಶೇಷ ಕಳೆ ಬಂದಿತ್ತು. ಕಲ್ಲಿನ ಮೆಟ್ಟಿಲುಗಳು ಪಸೆಕಟ್ಟಿ ಜಾರತೊಡಗಿದ್ದವು. ಮಳೆ ಧೋ ಎಂದು ಸುರಿಯುತ್ತಿತ್ತು. ಮುಂಗಾರು ಮಳೆಯ ಮೋಡಿಯಲ್ಲಿ ಸಿಲುಕಿದ ಈ ಭವನದ 'ಹೇಮಾಂಗಣ' ಹಾವಸೆಯ ಹಸಿರು ವರ್ಣದ ಚಿತ್ತಾರವನ್ನು ತನ್ನ ಉದ್ದಗಲಕ್ಕೂ ಬರೆಸಿಕೊಂಡು ಅಂದವಾಗಿ ಕಾಣುತ್ತಿತ್ತು. ತೇಜಸ್ವಿಯವರ



ಛಾಯಾಚಿತ್ರಗಳಿರುವ ಕಲಾನಿಕೇತನಕ್ಕೆ ಭೇಟಿ ನೀಡಿ, ಅಲ್ಲಿ ಮಳೆಯಲ್ಲಿ ತೊಯ್ಯುತ್ತಿದ್ದ ನಾಯಿಗುತ್ತಿಯ ಪ್ರತಿಮೆಯನ್ನು ನೋಡಿದಾಗ ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿ ಕಥನ ಕಣ್ಣಮುಂದೆ ಬಂದು ನಿಂತಿತು.

**(18ನೇ ಪುಟ ನೋಡಿ)**